**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 06-02-2026

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ಮತ್ತು ನಕ್ಷೆ, ವಾಹನ ಪಂಚನಾಮೆ ಪ್ರತಿ,ಐ ಎಮ ವರದಿ , ಶವ ಪಂಚನಾಮೆ, ಪಿ ಎಮ ವರದಿ, ಚಾರ್ಜ ಶೀಟ್ ಪ್ರತಿ, ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-9 ಎಂದು ಗುರುತಿಸಲಾಯಿತು.ಅದೇ ರೀತಿ ಅಟೆಸ್ಟೆಡ ಮಾಡಿದ ಪಡಿತರ ಚೀಟಿ, ನಾಲ್ಕು ಆಧಾರ ಪ್ರತಿ ಮತ್ತು ಒಂದು ಮರಣ ಪ್ರಮಾಣ ಪತ್ರ ಹಾಜರು ಪಡಿಸಿದ್ದೇನೆ. ಸದ್ರಿ ಸಾಕ್ಷಿ ಸದ್ರಿ ಮೇಲೆ ಹೇಳಿದ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಜೆರಾಕ್ಸ ಪ್ರತಿಗಳಿಗೆ ಹೊಂದಾಣಿಕೆ ಮಾಡಿ ನೋಡಿದಾಗ ಅವು ಸರಿ ಇರುತ್ತವೆ. ಆದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-10 ರಿಂದ 15 ಎಂದು ಗುರುತಿಸಿ ಮೂಲ ಪ್ರತಿಗಳನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

**ಪಾಟೀಸವಾಲುಃ- 2ನೇ ಅರ್ಜಿದಾರರ ಪರ ಶ್ರೀ ಎಸ್.ಎಮ್.ಬಿ ವಕೀಲರಿಂದ,**

ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿ . ಸದ್ರಿ ಅಪಘಾತ ದಿನ ಆಪಾದಿತ ವಾಹನದಲ್ಲಿ ಇಬ್ರು ಜನ ಸವಾರಿ ಮಾಡಿಕೊಂಡು ಹೋಗುತ್ತಿದ್ದರು. ಸದ್ರಿಯವರು ಸಾಗರದಿಂದ ಸಂಶಿಗೆ ಹೋಗುತ್ತಿದ್ದರು. ಸದ್ರಿ ದಿನ ಮೋಟರನ ಸೈಕಲನ್ನು ಮೃತ ನನ್ನ ಗಂಡ ತನ್ವೀರ ಚಲಾಯಿಸುತ್ತಿದ್ದರು. ಸದ್ರಿ ಬೈಕನ ಹಿಂದುಗಡೆ ರಿಜ್ವಾನ ಖಾನ ಎನ್ನುವವರು ಕುಳಿತಿದ್ದರು. ಇಬ್ಬರು ಹೆಲ್ಮೆಟ ಹಾಕಿರಲಿಲ್ಲ ಎಂದರೆ ಸರಿಯಲ್ಲ. ವಾಹನ ಜಪ್ತ ಮಾಡುವಾಗ ಪೊಲೀಸರು ಹೆಲ್ಮೆಟಗಳನ್ನು ಜಪ್ತ ಪಡಿಸಿಕೊಂಡಿದ್ದಾರೋ ಎಂಬುದು ನನಗೆ ಗೊತ್ತಿಲ್ಲ. ಪೋಲೀಸರು ಪ್ರಕರಣವನ್ನು ತನಿಖೆ ಮಾಡಿ ಮೃತ ನನ್ನ ಗಂಡನನ್ನು ಆರೋಪಿ ಮಾಡಿ ಆತನ ವಿರುದ್ಧ ದೊಷಾರೋಪಣ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿ. ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿರುವುದರಿಂದ, ನಮಗೆ ಪರಿಹಾರ ಪಡೆಯಲು ಕಾನೂನಿನನಲ್ಲಿ ಅವಕಾಶ ಇಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಅಪಘಾತ ಸಂಬಂಧ

ನಾನು ಹೇಳಿಕೆ ಕೊಟ್ಟಿರುವುದಿಲ್ಲ. ಸದ್ರಿ ದಿನ ನನ್ನ ಗಂಡ ಒಂದನೇ ಎದ್ರುದಾರನ ಬೈಕನ್ನು ಆತನ ಕೆಲಸ ಮಾಡಲು ತೆಗೆದುಕೊಂಡು ಹೋಗುತ್ತಿದ್ದರು ಎಂದು ಇದೇ ಮೊದಲ ಬಾರಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1ನೇ ಎದ್ರುದಾರನಿಂದ ಪರಿಹಾರ ಕೋರಿದ್ದೆನು, ಆದರೆ 1ನೇ ಎದ್ರುದಾರ ಯಾವುದೇ ಪರಿಹಾರ ಕೊಟ್ಟಿರುವುದಿಲ್ಲ. ಮೃತ ನನ್ನ ಗಂಡ 1ನೇ ಎದ್ರುದಾರನ ಕೆಲಸಕ್ಕಾಗಿ, ಅವನ ಬೈಕನ್ನು ತೆಗೆದುಕೊಂಡು ಹೋಗುತ್ತಿದ್ದಾಗ ಅಪಘಾತ ಆಗಿರುವುದರಿಂದ ನಾವು 1ನೇ ಎದ್ರುದಾರನ ವಿರುದ್ಧ ಪರಿಹಾರ ಕೇಳಬೇಕಾಗುತ್ತದೆ ಹೊರತಾಗಿ ಮೋಟಾರ ವಾಹನ ಕಾಯ್ದೆ ಅಡಿಯಲ್ಲಿ 2ನೇ ಎದ್ರುದಾರನ ವಿರುದ್ಧ ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಮೃತ ನನ್ನ ಗಂಡನಿಗೆ ಡಿ.ಎಲ್ ಇತ್ತು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ, ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಗಂಡನಿಗೆ ಡಿ.ಎಲ ಇರಲಿಲ್ಲ ಅದಕ್ಕಾಗಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಗಂಡ ಯಾವುದೇ ವ್ಯಾಪಾರ ವ್ಯವಹಾರ ವೃತ್ತಿ ಮಾಡುತ್ತಿರಲಿಲ್ಲ, ಆದರೆ ಕೂಲಿ ಕೆಲಸ ಮಾಡುತ್ತಿದ್ದರು. ಮೃತ ನನ್ನ ಗಂಡ ಪಿಯುಸಿ ವರೆಗೆ ಓದಿದ್ದರು, ನಾನು ಸಹ ಪಿಯುಸಿ ವರೆಗೆ ಓದಿರುತ್ತೇನೆ. ನನ್ನ ಗಂಡನ ನಿಖರವಾದ ವಯಸ್ಸು ತೋರಿಸಲು ಆತನ ಶಾಲಾ ದಾಖಲೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಅಪಘಾತ ದಿನದಂದು ಮೃತ ನನ್ನ ಗಂಡನಿಗೆ 45 ವರ್ಷಕ್ಕಿಂತ ಹೆಚ್ಚು ವಯಸ್ಸು ಆಗಿತ್ತು ಆ ಕಾರಣಕ್ಕಾಗಿ, ಆತನ ಶಾಲಾ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದ, ಆತನು ತಿಂಗಳಿಗೆ ರೂ.3,300/- ಆದಾಯ ಇತ್ತು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ. ನಾವು ಮೃತನ ಆದಾಯದ ಮೇಲೆ ಅವಲಂಬನೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಬರೆದಷ್ಟು ಶವ ಸಂಸ್ಕಾರ ಮತ್ತು ವಾಹನ ಬಾಡಿಗೆ ನಾವು ಹೇಳಿದಷ್ಟು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತವು ಮೃತ ನನ್ನ ಗಂಡನ ತಪ್ಪಿನಿಂದ ಆಗಿದ್ದು, ಆಗ ಆತನಿಗೆ ಡಿ ಎಲ್ ಮತ್ತು ವಾಹನ ಪಿಟ್ನೆಸ ಪ್ರಮಾಣ ಪತ್ರ ಇಲ್ಲದೆ ಇರುವುದರಿಂದ ನಾವು 2ನೇ ಎದ್ರುದಾರನ ವಿರುದ್ಧ ಪರಿಹಾರ ಕೇಳು ಬರುವುದಿಲ್ಲ ಎಂದರೆ ಸರಿಯಲ್ಲ.

ಎಂ.ವಿ.ಸಿಃ 307/2024

**ಪಿ.ಡಬ್ಲ್ಯುಃ 1**

**ದಿನಾಂಕಃ** 06-02-2026

1ನೇ ಎದ್ರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಅವರ ಪರವಾಗಿ ಪಾಟೀ ಸವಾಲ ಏನೂ ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**